**ದಿನಾಂಕ:19.09.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಮುಖ್ಯವಿಚಾರಣೆ: ಶ್ರೀಮತಿ.ಹೆಚ್.ಡಿ.ಲತಾ ವಕೀಲರಿಂದ ಅರ್ಜಿದಾರರ ಪರವಾಗಿ.**

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತದೆ. ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ಅದರಲ್ಲಿ ನನಗೆ ನೀಡಿದ ಅಧಿಕಾರ ಪತ್ರ ನಿಪಿ:17 ಎಂದು, ಒಳರೋಗಿ ದಾಖಲೆ ನಿಪಿ:18 ಎಂದು, ಹೊರರೋಗಿ ದಾಖಲೆ ನಿಪಿ:19 ಎಂದು ಹಾಗೂ ಎಮ್.ಎಲ್.ಸಿ ದೃಢೀಕೃತ ನಕಲು ನಿಪಿ:20 ಎಂದು ಗುರುತಿಸಲಾಯಿತು.

**ಪಾಟೀಸವಾಲು: ಶ್ರೀ.ವಿ.ಶ್ರೀಹರಿ ನಾಯ್ಡು ವಕೀಲರಿಂದ ಒಂದನೇ ಎದುರುದಾರರ ಪರವಾಗಿ.**

ನಾನು ಹಾಜರುಪಡಿಸಿರುವ ನಿಪಿ:18 ಮತ್ತು 19 ದಾಖಲೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸದರಿ ದಾಖಲೆಗಳನ್ನು ನಾನು ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸೃಷ್ಟಿಸಿ ತಂದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.